**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ .**

**ಎಸ್.ಸಿ. ನಂ.69/2024**

**ದಿನಾಂಕಃ 19 ನೇ ಮೇ ಮಾಹೆ 2025**

**ಫಿರ್ಯಾದುದಾರರು** ಃ ಗ್ರಾಮಾಂತರ ಪೊಲೀಸ್ ಠಾಣೆ ದಾವಣಗೆರೆ.

-/ **ವಿರುದ್ಧ** /-

**ಆರೋಪಿ /ತರು** ಃ ಮೈಲಾರಿ ಮತ್ತು ಇತರರು

**ದೋಷಾರೋಪಣೆ**

ಶ್ರೀಯುತ ಃ **ಎಂ.ಹೆಚ್. ಅಣ್ಣಯ್ಯನವರ** ಬಿಕಾಂ.ಎಲ್.ಎಲ್.ಬಿ. (ವಿಶೇಷ), 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ, ಆದ ನಾನು ನಿಮ್ಮನ್ನು ಅಂದರೆ,

1. ಮೈಲಾರಿ ಬಿನ್ ಬಿರಿಯಾನಿ ರಾಜಣ್ಣ, ವಯಸ್ಸು 18 ವರ್ಷ, ಕೂಲಿ ಕೆಲಸ, ವಾಸ 12 ನೇ ಕ್ರಾಸ್, ಭರತ್ ಕಾಲೋನಿ, ದಾವಣಗೆರೆ ಸಿಟಿ, ದಾವಣಗೆರೆ.

2. ಪೃಥ್ವಿ ನಾಯ್ಕ ಬಿ. ಯಾನೇ ಬ್ಲೇಡ್ ಬಿನ್ ಬಸವರಾಜ ನಾಯ್ಕ, ವಯಸ್ಸು 20 ವರ್ಷ, ಕೂಲಿ ಕೆಲಸ , ವಾಸ 6 ನೇ ಕ್ರಾಸ್, ಭರತ್ ಕಾಲೋನಿ, ದಾವಣಗೆರೆ ಸಿಟಿ, ದಾವಣಗೆರೆ.

3. ಸಂಜಯ್ ಎನ್. ಬಿನ್ ನಾಗರಾಜ, ವಯಸ್ಸು 18 ವರ್ಷ, ವಿದ್ಯಾರ್ಥಿ, ವಾಸ ಸೇವಾಲಾಲ್ ದೇವಸ್ಥಾನದ ಹಿಂಭಾಗ, 8 ನೇ ಕ್ರಾಸ್, ಭರತ್ ಕಾಲೋನಿ, ದಾವಣಗೆರೆ ಸಿಟಿ, ದಾವಣಗೆರೆ.

4. ವೀರೇಶ್ ಯಾನೇ ಬೆಂಡಿ ಬಿನ್ ಸಂಗಪ್ಪ, ವಯಸ್ಸು 20 ವರ್ಷ, ವಿದ್ಯಾರ್ಥಿ, ವಾಸ 10 ನೇ ಕ್ರಾಸ್, ಭರತ್ ಕಾಲೋನಿ, ದಾವಣಗೆರೆ ಸಿಟಿ, ದಾವಣಗೆರೆ.

ಆರೋಪಿಗಳಾದ ನಿಮ್ಮ ಮೇಲಿನ ದೋಷಾರೋಪಣೆ ಈ ಕೆಳಕಂಡಂತೆ ಇರುತ್ತದೆ.

ದಿಃ26-01-2024 ರಂದು ಬೆಳಗಿನ ಜಾವ 1-00 ಗಂಟೆ ಸಮಯದಲ್ಲಿ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದಾವಣಗೆರೆ -ಬಾತಿಕೆರೆ ಪಕ್ಕದ ಆಯುರ್ವೇದಿಕ್ ಕಾಲೇಜ್ ಹತ್ತಿರ ಹಳೇ ಪಿ.ಬಿ.ರಸ್ತೆಯಲ್ಲಿ ಬೈಕಿನಲ್ಲಿ ಚಾಸಾ.1 ಬಸವರಾಜರವರು ಹೋಗುತ್ತಿರುವಾಗ ಆರೋಪಿತರು ದರೋಡೆ ಮಾಡುವ ಉದ್ದೇಶದಿಂದ ನಂಬರ್ ಪ್ಲೇಟ್ ಇಲ್ಲದ ಬಜಾಜ್ ಪಲ್ಸರ್ 220 ಬೈಕ್ ಹಾಗೂ ಕೆಎ-16-ಇ.ಎಫ್.1958 ಹೀರೋ ಫ್ಯಾಶನ್ ಪ್ರೋ ಬೈಕಿನಲ್ಲಿ ಚಾಸಾ.1 ಬಸವರಾಜರವರಿಗೆ ಅಡ್ಡಗಟ್ಟಿ ನಿಲ್ಲಿಸಿ ಮೊಬೈಲ್ ಕೊಡಲು ಕೇಳಿದ್ದು, ಕೊಡದೇ ಇದ್ದಾಗ ಎಲ್ಲರೂ ಸೇರಿ ಚಾಸಾ.1 ರವರಿಗೆ ಕಪಾಳಕ್ಕೆ, ತಲೆಗೆ ಹೊಡೆದು ಕೆಳಗೆ ಬೀಳಿಸಿ ಮೈ ಕೈಗೆ, ಕಣ್ಣಿಗೆ ಹೊಡೆದು ರಕ್ತಗಾಯಪಡಿಸಿದ್ದಲ್ಲದೇ, ಚಾಸಾ.1 ರವರ ಸ್ಯಾಮ್ ಸಂಗ್ ಮೊಬೈಲ್ ಹಾಗೂ ರೂ.50 ನಗದು ಹಣ ಕಿತ್ತುಕೊಂಡು ದರೋಡೆ ಮಾಡಿಕೊಂಡು ಹೋಗಿದ್ದು, ಹಾಗಾಗಿ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.395 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲಿನ ಆರೋಪಕ್ಕೆ ನಿಮ್ಮನ್ನು ಗುರಿಪಡಿಸಿ ಈ ನ್ಯಾಯಾಲಯದಲ್ಲಿ ವಿಚಾರಣೆ ನಡೆಯಬೇಕೆಂದು ನಿರ್ದೇಶಿಸಲಾಗಿದೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ**

**ಎಸ್.ಸಿ. ನಂ.69/2024**

4. ವೀರೇಶ್ ಯಾನೇ ಬೆಂಡಿ ಬಿನ್ ಸಂಗಪ್ಪ, ವಯಸ್ಸು 20 ವರ್ಷ, ವಿದ್ಯಾರ್ಥಿ, ವಾಸ 10 ನೇ ಕ್ರಾಸ್, ಭರತ್ ಕಾಲೋನಿ, ದಾವಣಗೆರೆ ಸಿಟಿ, ದಾವಣಗೆರೆ.

**ಆರೋಪಣೆ**

ಪ್ರಶ್ನೆ 1 ಈಗ ಓದಿ ಹೇಳಿದ ಆಪಾದನೆ ನಿನಗೆ ತಿಳಿಯಿತೆ?
ಉತ್ತರ ಃ

ಪ್ರಶ್ನೆ 2 ನೀನು ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೇ?
ಉತ್ತರ ಃ

(ಮೇಲೆ ನಮೂದು ಮಾಡಿದ ಆರೋಪಿಯ ಹೇಳಿಕೆಯನ್ನು ತನ್ನ ಸಮಕ್ಷಮದಲ್ಲಿ ತೆಗೆದುಕೊಂಡಿದ್ದು ಸದರಿ ಹೇಳಿಕೆಯು ಆರೋಪಿ ನೀಡಿದ ನಿಜವಾದ ಹೇಳಿಕೆ ಇರುತ್ತದೆ.)

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.